# ಓದುಗರ ಸ್ಪಂದನ

## ಆದರ್ಶ ಕುಟುಂಬ

**ಭಾ**ರತೀಯ ಸಂಪ್ರದಾಯದಲ್ಲಿ ಪ್ರತಿಯೊಂದು ಮಗುವೂ ದೇವರಿಗೆ ಸಮಾನ. ಮಗುವಿನಲ್ಲಿ ಪ್ರೀತಿ, ವಾತ್ಸಲ್ಯಗಳ ಬೀಜ ಬಿತ್ತಿದರೆ ಅದು ಮೊಳಕೆಯೊಡೆದು ಮಗುವಿನ ವ್ಯಕ್ತಿತ್ವ ಸಕಾರಾತ್ಮಕ ವಾಗಿ ರೂಪುಗೊಳ್ಳುತ್ತದೆ. ಲಕ್ಷ್ಮೀಧರ ಅಮಾತ್ಯನ ತಾಯಿ ತನ್ನ ಮಗುವಿಗೆ ಹಾಲನ್ನು ಉಣಿಸುವಾಗ, "ಕೆರೆಗಳನ್ನು ಕಟ್ಟಿಸು, ಸಾಲು ಮರಗಳನ್ನು ನೆಡಿಸು, ಸೆರೆಯಲ್ಲಿರುವವರನ್ನು ಬಿಡಿಸು" ಎಂದು ಹೇಳುತ್ತಿದ್ದಳಂತೆ. ಮಗುವಿನ ಜನನ ಪೂರ್ವದಲ್ಲಿ ಎಷ್ಟೊಂದು ವೇದನೆಯನ್ನು ಸಹಿಸಿಕೊಂಡು ಮಗುವಿಗೆ ಜನ್ಮವಿತ್ತ ತಾಯಿಯೇ ತನ್ನ ಮಗುವಿಗಾಗಿ ವೇಳೆ ವಿನಿಯೋಗಿಸಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ಇಂದು ಸರ್ವೇ ಸಾಮಾನ್ಯವಾಗಿದೆ. ತನ್ನ ಕುಟುಂಬದ ಪಾಲನೆಗಾಗಿ, ಹೊಟ್ಟೆ ಬಟ್ಟೆ, ಮಲಗುವ ಕಟ್ಟೆಗಾಗಿ, ಮಕ್ಕಳ ವಿದ್ಯಾಭ್ಯಾಸದ ವೆಚ್ಚವನ್ನು ಭರಿಸುವುದಕ್ಕಾಗಿ, ದುಬಾರಿಯಾಗುತ್ತಿರುವ ಜೀವನವೆಚ್ಚವನ್ನು ಪೂರೈಸುವುದಕ್ಕಾಗಿ, ಸಂಸಾರ ತೂಗಿಸಲು ಸ್ತ್ರೀಯು ಸಹ ಪುರುಷನಿಗೆ ಸಮಸಮನಾಗಿ ಹೊರಗಡೆ ದುಡಿಯುತ್ತಿದ್ದಾಳೆ. ಇದರಿಂದ ಬಲವಾದ ಪೆಟ್ಟು ಬಿದ್ದಿರುವುದು ಮಕ್ಕಳ ಪಾಲನೆ ಪೋಷಣೆಗೆ ಮತ್ತು ಕುಟುಂಬದ ಸ್ವಾಸ್ಥ್ಯಕ್ಕೆ. ಮಕ್ಕಳ ಶಿಕ್ಷಣ ಶೈಶವದಿಂದಲೇ ಪ್ರಾರಂಭವಾಗುತ್ತದೆ. ಅಮೆರಿಕದ ಅಧ್ಯಕ್ಷರಾದವರೊಬ್ಬರು ತಮ್ಮ ಕಾಲುಚೀಲಗಳನ್ನು ತಾವೇ ಒಗೆದುಕೊಳ್ಳುತ್ತಿದ್ದರಂತೆ. ಆಗ ಅವರನ್ನು "ನಿಮಗೆ ಬೇಕಾದಷ್ಟು ಜನ ಸೇವಕರು ಇದ್ದಾರೆ, ಅಂತಹದರಲ್ಲಿ ನಿಮ್ಮ ಕಾಲು ಚೀಲಗಳನ್ನು ನೀವೇ ಏಕೆ ಒಗೆದುಕೊಳ್ಳುತ್ತೀರಿ?" ಎಂದು ಪ್ರಶ್ನಿಸಿದಾಗ ಆತ "ನನ್ನ ತಾಯಿ ನನ್ನ ಬಾಲ್ಯಕಾಲದಲ್ಲಿ ನನ್ನ ಕಾಲುಚೀಲಗಳನ್ನು ನಾನೇ ಒಗೆದುಕೊಳ್ಳಬೇಕೆಂದು ಕಲಿಸಿದ್ದಾಳೆ" ಎಂದರಂತೆ.

> " ನಡವಳಿಕೆಯಿಂದ ಮನುಷ್ಯ ನರನಾಗುತ್ತಾನೆ " ಎಂಬ ಸಾಮಾನ್ಯ ಹೇಳಿಕೆಯಿದೆ. " ಮನಸ್ಸಿನಿಂದ ಮನುಷ್ಯನಾಗುತ್ತಾನೆ" ಎಂಬ ಎರಡನೆಯ ಹೇಳಿಕೆಯೂ ಇದೆ. ಆದರೆ ಇವೆರಡಕ್ಕಿಂತಲೂ ಮುಖ್ಯವಾದ ಹೇಳಿಕೆ ಮೂರನೆಯದು : " ಮನೆಯೇ ಮಾನವನನ್ನು ನಿರ್ಮಿಸುತ್ತದೆ."
>
> – ಸ್ಯಾಮ್ಯುಯಲ್ ಸ್ಮೈಲ್ಸ್

ಶಿವಾಜಿ ಮಹಾರಾಜರ ಬಾಲ್ಯದಲ್ಲಿ ಅವರ ತಾಯಿ ಜೀಜಾಬಾಯಿ ಅನೇಕ ವೀರರ ಶೌರ್ಯದ ಹಾಗೂ ಪರೋಪಕಾರದ ವಿಚಾರಗಳನ್ನೆಲ್ಲ ಹೇಳಿ ಅವರ ಚಾರಿತ್ರ್ಯ ಶುದ್ಧಿಗೆ ಭದ್ರವಾದ ತಳಪಾಯ ಹಾಕಿದ್ದರು. ಹೀಗಾಗಿ ತಾಯಿಯಿಂದ ಕಲಿತದ್ದನ್ನೆಲ್ಲ ಶಿವಾಜಿ ಮಹಾರಾಜರು ಒಂದು ವ್ರತವನ್ನಾಗಿ ತಮ್ಮ ಬದುಕಿನುದ್ದಕ್ಕೂ ಪಾಲಿಸುತ್ತಿದ್ದರು.

ಮಗುವಿನ ಶೈಶವ ಹಾಗೂ ಬಾಲ್ಯದಲ್ಲಿ ನೀಡಬೇಕಾದ ಸರಿಯಾದ ಶಿಕ್ಷಣದ ಅಭಾವವೇ ಎಲ್ಲ ಸಾಮಾಜಿಕ ಅನಿಷ್ಟಗಳಿಗೂ ಮೂಲ ಕಾರಣ ಎಂದು ತಿಳಿಯುತ್ತದೆ. ಉದಾಹರಣೆಗೆ ಶಿಸ್ತು, ಆರೋಗ್ಯ ಪ್ರಜ್ಞೆ ಮುಂತಾದವನ್ನು ಬಾಲ್ಯದಿಂದಲೇ ಬೆಳೆಸಿದರೆ ಮಕ್ಕಳು ಮುಂದೆ ಕುಡಿತ ಮುಂತಾದ ದುಶ್ಚಟಗಳಿಗೆ ಬಲಿಯಾಗುವ ಸಾಧ್ಯತೆ ಕಡಿಮೆ. ಮದ್ಯಪಾನ, ಜೂಜು ಇವುಗಳಿಗೆ ಪಕ್ಕಾದ ಒಬ್ಬನೇ ಒಬ್ಬ ವ್ಯಕ್ತಿ ಒಂದು ಕುಟುಂಬದಲ್ಲಿದ್ದರೆ ಸಾಕು, ಆ ಕುಟುಂಬ ನರಕಸದೃಶ ವಾಗುತ್ತದೆ. ಮಕ್ಕಳು ಸ್ನೇಹಿತರನ್ನು ಆರಿಸಿಕೊಳ್ಳುವುದನ್ನು ಸೂಕ್ಷ್ಮವಾಗಿ ಗಮನಿಸಬೇಕು. ಕೆಟ್ಟ ಜನರ ಸಹವಾಸ ದುರಭ್ಯಾಸಗಳನ್ನು ಬಹಳ ಬೇಗ ಕಲಿಸಿಬಿಡುತ್ತದೆ.

ಆದರ್ಶಕುಂಟುಂಬಕ್ಕೆ ಅಗತ್ಯವಿರುವ ಮತ್ತೊಂದು ಮುಖ್ಯ ಅಂಶವೆಂದರೆ, ಹೊಂದಾಣಿಕೆ. ಈ ಹೊಂದಾಣಿಕೆಯ ಮೂಲದಲ್ಲಿರುವುದು ಪರಸ್ಪರ ವಿಶ್ವಾಸ. ಸಂಸಾರದಲ್ಲಿ ಮುಖ್ಯವಾಗಿ ಪೀಳಿಗೆಗಳ ಅಂತರದಿಂದ ಉಂಟಾಗುವ ಮನಸ್ತಾಪ, ವೈಮನಸ್ಯಗಳಿಗೆ ಪ್ರೀತಿ ವಿಶ್ವಾಸಗಳ ಅಭಾವವೇ ಕಾರಣ.

ಆದರ್ಶ ಕುಟುಂಬದ ಆಧಾರಸ್ತಂಭವೇ ಸ್ವಾರ್ಥತ್ಯಾಗ. ಇದರ ನಿದರ್ಶನವೊಂದನ್ನು ನಾವು ಮಹಾಭಾರತದಲ್ಲಿ ನೋಡಬಹುದು. ಹಸಿದು ಬಂದ ಅತಿಥಿಗಳ ಸತ್ಕಾರಕ್ಕಾಗಿ ತಮ್ಮ ಅನ್ನವನ್ನೇ ಕೊಡಲು ಮುಂದಾದ ವೃದ್ಧ ಮಾತಾಪಿತೃಗಳನ್ನು ತಡೆದು ಮಗ ಸೊಸೆ ಅತಿಥಿಗಳಿಗಾಗಿ ತಮ್ಮ ಅನ್ನವನ್ನೇ ಕೊಟ್ಟು ಹಸಿದು ಕೊಂಡೇ ಇರುತ್ತಾರೆ. ಇಂತಹ ಉದಾತ್ತ ಮೌಲ್ಯಗಳು ವ್ಯಕ್ತಿಗಳಲ್ಲಿ ನೆಲೆಯೂರುವವರೆಗೂ ಆದರ್ಶಕುಟುಂಬ ಬರೀ ಕನಸಷ್ಟೇ.

**—ಲಲಿತಮ್ಮ ಡಾ. ಚಂದ್ರಶೇಖರ, ಹರಿಹರ**

**ಅ**ನೇಕ ಸಂಸಾರಸ್ಥರು ಸಮಾಜದಲ್ಲಿ ಪ್ರತಿಷ್ಠೆಗಾಗಿಯೇ ಬದುಕಬೇಕೆಂದು ಬಯಸುತ್ತಾರೆ. ಅದೇ ಅವರಿಗೆ ಆದರ್ಶ. ಪ್ರತಿಷ್ಠೆಯ ಪ್ರತೀಕಗಳಾಗಿರುವ ಎಲ್ಲ ಭೋಗವಸ್ತುಗಳನ್ನು ಅಂದರೆ, ದೊಡ್ಡ ಮನೆ, ಟಿ.ವಿ. ವಾಷಿಂಗ್ ಮೆಷಿನ್, ದುಬಾರಿ ಪೀಠೋಪಕರಣಗಳು, ಮಕ್ಕಳಿಗೆ ದುಬಾರಿ ಕಾನ್ವೆಂಟ್‌ಗಳಲ್ಲಿ ವಿದ್ಯಾಭ್ಯಾಸ, ಮುಂತಾದುವನ್ನೇ ಜೀವನದಲ್ಲಿ ಪಡೆಯಲು ಯೋಗ್ಯ ಎಂದೆಣಿಸಿ ಅವುಗಳಿಗಾಗಿ ಹಗಲು ರಾತ್ರಿ ಶ್ರಮಿಸುತ್ತಾರೆ. ಈ ಧಾವಂತದಲ್ಲಿ ಕೌಟುಂಬಿಕ ಸ್ವಾಸ್ಥ್ಯದ ಕಡೆ ಗಮನ ಕೊಡಲು ಅವರಿಗೆ ಮನಸ್ಸೂ ಇರುವುದಿಲ್ಲ, ಅದು ಅವರ ದೃಷ್ಟಿಯಲ್ಲಿ

ಅಷ್ಟೊಂದು ಮಹತ್ವದ್ದಾಗಿಯೂ ಕಾಣಿಸುವುದಿಲ್ಲ. ವಯಸ್ಸಾದ ತಮ್ಮ ಸ್ವಂತ ತಂದೆ ತಾಯಿಯರ ಭಾವನೆಯಾಗಲಿ, ಮಕ್ಕಳಲ್ಲಿರುವ ಪ್ರೀತಿಗಾಗಿನ ಹಸಿವಾಗಲಿ ಯಾವುದೂ ಇವರ ಗಮನಕ್ಕೆ ಬರುವುದಿಲ್ಲ. ಪ್ರೀತಿಯಿಂದ ಸೊರಗಿರುವ ಈ ಮಕ್ಕಳೇ ಮುಂದೆ ತಮ್ಮ "ಈ ಮೇಲ್ಪಂಕ್ತಿಯನ್ನು" ಚಾಚೂ ತಪ್ಪದೆ ಅನುಸರಿಸಿ ಅವರನ್ನೇ ತಿರಸ್ಕರಿಸಿದಾಗ, ಅವರಿಗೆ ಭ್ರಮನಿರಸನವಾಗಿ ತಾವು ಎಲ್ಲೋ ತಪ್ಪಿದೆವು ಎಂದು ತಿಳಿವಳಿಕೆ ಬರುವ ಹೊತ್ತಿಗೆ ಬಹಳ ತಡವಾಗಿ ಹೋಗಿರುತ್ತದೆ. "ಮಾಡಿದ್ದುಣ್ಣೋ ಮಹರಾಯ" ಎಂಬ ಮಾತಿನಂತೆ ಆಗ ಅವರ ಪಶ್ಚಾತ್ತಾಪಕ್ಕೆ ಕೊನೆ ಇರುವುದಿಲ್ಲ. ವೈಯಕ್ತಿಕ ಬದುಕು ಹೇಗಾದರೂ ಹೋಗಲಿ, ಅವರು ಸಮಾಜಕ್ಕೆ ದುಷ್ಟರಾದ ತಮ್ಮ ಮಕ್ಕಳನ್ನೇ ಕೊಡುಗೆಯಾಗಿ ಕೊಟ್ಟಿರುತ್ತಾರೆ ಎಂಬ ಅರಿವೂ ಅವರಿಗಿರುವುದಿಲ್ಲ.

ಆದರ್ಶ ಕುಟುಂಬದಲ್ಲಿ ಬೆಳೆದುಬಂದ ಕೆಲವು ಆದರ್ಶ ವ್ಯಕ್ತಿಗಳ ಚರಿತ್ರೆ ಓದಿದಾಗ ನಮ್ಮ ಅರಿವಿಗೆ ಬರುವ ಅಂಶವೆಂದರೆ ಅವರೆಲ್ಲ ಒಳ್ಳೆ ತಾಯಿ ತಂದೆಯರ ಪ್ರಭಾವದಲ್ಲಿ ಬೆಳೆದವರಾಗಿದ್ದು ಕಷ್ಟ-ನಿಷ್ಠುರಗಳನ್ನು ಧೈರ್ಯವಾಗಿ ಎದುರಿಸಿ, ಸಮಾಜದ ನೋವುಗಳಿಗೆ ಸ್ಪಂದಿಸಿದವರಾಗಿದ್ದರು ಎಂಬುದು. ಅಂತಹವರು ಬಿಟ್ಟು ಹೋದ ಮೌಲ್ಯಪರಂಪರೆಯನ್ನು ನಮ್ಮ ಮಕ್ಕಳಿಗೆ ನೀಡುವುದು ನಮ್ಮ ಕರ್ತವ್ಯವಲ್ಲವೇ? ಅಂತಹ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಬೇಕಾದರೆ ನಾವು ಮಾಡಬೇಕಾದುದೇನು ಎಂಬುದನ್ನು ಡಿ.ವಿ.ಜಿ.ಯವರು ಹೀಗೆ ತಿಳಿಸುತ್ತಾರೆ : "ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು, ಕಲ್ಲಾಗು ಕಷ್ಟಗಳ ಮಳೆ ಸುರಿಯೆ, ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ ಎಲ್ಲರೊಳಗೊಂದಾಗು ಮಂಕುತಿಮ್ಮ"

—ಶ್ರೀಮತಿ ಶಕುಂತಲಾ ಮೂರ್ತಿ, ಮೈಸೂರು

**ತಾ**ಯಿ ಕುಟುಂಬವನ್ನು ನಡೆಸುವ ಸಾರಥಿ. ಮಕ್ಕಳ ಪಾಲಿಗೆ ಅವಳು ಮೊದಲನೇ ಪ್ರತ್ಯಕ್ಷ ದೇವರು. ತಂದೆ ಎರಡನೇ ದೇವರು. ಮಕ್ಕಳನ್ನು ವಾತ್ಸಲ್ಯದಿಂದ ಬೆಳೆಸುವ ಜವಾಬ್ದಾರಿಯನ್ನು ಹೊತ್ತಿರುವುದರಿಂದಲೇ ತಾಯಿ-ತಂದೆಗಳನ್ನು ಉಪನಿಷತ್ತಿನಲ್ಲಿ "ಮಾತೃದೇವೋ ಭವ" "ಪಿತೃದೇವೋ ಭವ" ಎಂದು ಹೇಳಿದ್ದಾರೆ. ಇಂದಿನ ಧಾವಂತದ ಬದುಕಿನಲ್ಲಿಯೂ ತಾಯಿ ತಂದೆಯರ ಸ್ಥಾನವನ್ನು ಮತ್ತಾರೂ ತುಂಬಲು ಸಾಧ್ಯವಿಲ್ಲದ್ದರಿಂದಲೇ ಅವರು ಪೂಜ್ಯರೆನಿಸುತ್ತಾರೆ.

"ಹೂವನ್ನು ಕೊಡಲು ಆಗದಿದ್ದಲ್ಲಿ ಹೂವಿನ ಎಸಳನ್ನಾದರೂ ಕೊಡಬೇಕು" ಎಂದು ಹಿರಿಯರು ಹೇಳುತ್ತಾರೆ. ಅದರಂತೆ ಹಿಂದಿನವರು ತಮ್ಮ ಕುಟುಂಬಗಳಲ್ಲಿ ಆಚರಿಸುತ್ತಿದ್ದ ಎಲ್ಲ ಸಾಂಪ್ರದಾಯಿಕ ಹಬ್ಬ, ಹರಿದಿನ, ಪೂಜೆ ಮುಂತಾದವುಗಳನ್ನು ಚಾಚೂ ತಪ್ಪದೆ ಆಚರಿಸಲು ಸಾಧ್ಯವಿಲ್ಲದಿದ್ದರೂ ಸಾಧ್ಯವಾದಷ್ಟು ಮಟ್ಟಿಗೆ ಆ ಸಂಪ್ರದಾಯಗಳನ್ನು ಉಳಿಸಿಕೊಂಡುಬರುವುದರಿಂದ ಮಕ್ಕಳಲ್ಲಿ ಒಳ್ಳೆಯ ಸಂಸ್ಕಾರ ಬೆಳೆಯಲು ಸಹಾಯಕವಾಗುತ್ತದೆ.

ಕೌಟುಂಬಿಕ ಜೀವನದಲ್ಲಿ ಎದುರಾಗಬಹುದಾದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಈ ಸಲಹೆ ನೆರವಾಗುತ್ತದೆ: "ಜೀವನ ಒಂದು ಗಣಿತ. ಸ್ನೇಹಿತರನ್ನು ಕೂಡಿಸಬೇಕು, ಶತ್ರುಗಳನ್ನು ಕಳೆಯಬೇಕು, ಬಂಧು-ಮಿತ್ರರನ್ನು ಗುಣಿಸಿ ಹೆಚ್ಚಿಸಬೇಕು. ಹಿತಶತ್ರುಗಳನ್ನು ಭಾಗಿಸಿ ನಾಶಮಾಡಬೇಕು." ನಮಗೆದುರಾಗುವ ಎಲ್ಲ ಅಪಾಯಗಳನ್ನು ಉಪಾಯದಿಂದ ಗೆಲ್ಲುತ್ತಾ ಸಾಗಬೇಕು. ಕುಟುಂಬದ ಎಲ್ಲ ಸದಸ್ಯರೂ, ಪರಸ್ಪರ ನೋವು-ನಲಿವುಗಳಿಗೆ ಸ್ಪಂದಿಸುವ ಮನೋಭಾವನೆಯನ್ನು ಬೆಳೆಸಿಕೊಂಡಲ್ಲಿ ಅಂತಹ ಕುಟುಂಬಗಳು ನೆಮ್ಮದಿ,ಭದ್ರತೆಗಳ ಆಸರೆಯನ್ನು ನೀಡುವುದರಲ್ಲಿ ಸಂದೇಹವಿಲ್ಲ.

— ಮಾಲತಿ ಎಂ. , ಭದ್ರಾವತಿ

**ಈ** "ಕಂಪ್ಯೂಟರ್" ಯುಗದಲ್ಲಿ ಕಂಪ್ಯೂಟರ್‌ನಂತೆ ನಮ್ಮೆಲ್ಲರ ಬದುಕು ಯಾಂತ್ರಿಕವಾಗುತ್ತಾ ಪರಸ್ಪರ ಪ್ರೀತಿ, ಔದಾರ್ಯಗಳು ಕೌಟುಂಬಿಕ ಹಾಗೂ ಸಾಮಾಜಿಕ ಬದುಕಿನಲ್ಲಿ ಬಹಳ ಬೇಗ ಮಾಯವಾಗುತ್ತಿರುವ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ. ನಮ್ಮ ಜೀವನದ ಎಲ್ಲ ವ್ಯಾಪಾರಗಳನ್ನೂ ಕಂಪ್ಯೂಟರಿಗೇ ವಹಿಸಿ ಕಂಪ್ಯೂಟರ್ ನಿರ್ದೇಶಿಸಿದಂತೆ ನಾವು ನಡೆಯುವಷ್ಟರ ಮಟ್ಟಿಗೆ ಬದುಕನ್ನು "ಸರಳೀಕರಣ"ಗೊಳಿಸಿದ್ದೇವೆ. ಇಂದು ವಿವಾಹಕ್ಕೆ ಗಂಡು ಹೆಣ್ಣುಗಳನ್ನು ಕೂಡಿಸುವ ಕೆಲಸವನ್ನೂ ಕಂಪ್ಯೂಟರೇ ಮಾಡುವುದು! ಕೌಟುಂಬಿಕ ವೈವಾಹಿಕ ಬದುಕಿನಲ್ಲಿ ವ್ಯಾಪಕವಾಗಿ ಕಾಣಬರುತ್ತಿರುವ ಅಭದ್ರತೆಯ ಭಾವದಿಂದಲೋ, ಅಥವಾ ತನ್ನನ್ನು ಕುಟುಂಬ-ವ್ಯವಸ್ಥೆಯ ಆಚೆಗೂ ಗುರುತಿಸಿಕೊಳ್ಳುವ ತವಕದಿಂದಲೋ ಅಥವಾ ಸಂಸಾರದ ರಥವನ್ನು ಸಾಗಿಸಲು ಹಾಗೂ ಸಮಾಜದಲ್ಲಿ ತಮ್ಮ ಅಂತಸ್ತನ್ನು ಕಾಪಾಡಿಕೊಳ್ಳುವ ಸಲುವಾಗಿಯೋ ಕುಟುಂಬದ ಆಧಾರವೆನಿಸಿರುವ ತಾಯಂದಿರೇ ದುಡಿಯಲು ಹೊರಗೆ ಹೋಗಲೇಬೇಕಾದ ಪರಿಸ್ಥಿತಿಯಲ್ಲಿ ತಾಯ್ತಂದೆ, ಮಕ್ಕಳು ಎಲ್ಲರೂ ಒಟ್ಟಿಗೆ ಬೆರೆಯುವುದರ ಆನಂದ ಅವಕಾಶಗಳು ಕಡಿಮೆಯಾಗುತ್ತಿವೆ.

ದುಡಿಮೆಯ ನಂತರ ಮನೆಯಲ್ಲಿ ಸಿಗುವ ಅಲ್ಪ ಸಮಯವನ್ನೂ ಟಿ.ವಿ. ಮುಂದೆಯೇ ಕಳೆಯುತ್ತಿರುವುದರಿಂದ ಮನೆಯ ಮಂದಿ ನಾಲ್ಕು ಗೋಡೆಗಳ ಮಧ್ಯೆಯೇ ಇದ್ದರೂ ಅವರವರ ಪ್ರಪಂಚಗಳೇ ಬೇರೆಯಾಗಿ ಕುಟುಂಬದ ಸದಸ್ಯರ ನಡುವಿನ ಅಂತರ ಹೆಚ್ಚಾಗುತ್ತಲೇ ಹೋಗುತ್ತಿದೆ. ಮಾನವೀಯ ಸಂಬಂಧಗಳು, ಪರಸ್ಪರರನ್ನು ತಿಳಿಯುವುದು ಇವುಗಳೇ ಆಧಾರವೆನಿಸಿರುವ ಕುಟುಂಬ ವ್ಯವಸ್ಥೆ, ಇವುಗಳ ಅಭಾವದಿಂದ ಈ ವ್ಯವಸ್ಥೆಯ ಸೌಧ ನಿಧಾನವಾಗಿ ಕುಸಿಯುತ್ತಿರುವುದನ್ನು ಕಾಣಬಹುದು.

ಈ "ಕಂಪ್ಯೂಟರ್" ಯುಗದಲ್ಲಿ ಮತ್ತೆ ಕೌಟುಂಬಿಕ ಮೌಲ್ಯಗಳು ಪುನಶ್ಚೇತನಗೊಳ್ಳಬೇಕಾದರೆ ಕುಟುಂಬದ ಸದಸ್ಯರೆಲ್ಲರೂ ಒಬ್ಬರಿಗೊಬ್ಬರು ಸೇರಿ ಭಾವ ಹಾಗೂ ವಿಚಾರವಿನಿಮಯ ಮಾಡಿಕೊಳ್ಳಲು ಅವಕಾಶ ಹಾಗೂ ಸಂದರ್ಭಗಳು ಹೆಚ್ಚಾಗಬೇಕು. ಇದು ಆರಂಭವಾಗಬೇಕಾದುದು ಕುಟುಂಬದ ಜವಾಬ್ದಾರಿಯನ್ನು ಹೊತ್ತ

ಹಿರಿಯರಿಂದ. ಮನೆಯ ಹಿರಿಯರು ಉತ್ತಮ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಮಕ್ಕಳಲ್ಲೂ ಬಿತ್ತಿದರೆ ಆ ಮೌಲ್ಯಗಳೇ ಆನಂದವನ್ನು ನೀಡುವುವು. ಉದಾಹರಣೆಗೆ ಟಿ.ವಿ. ಯಲ್ಲಿ ಬಿತ್ತರಿಸಲಾಗುವ ಏಕತಾನದ ಕಾರ್ಯಕ್ರಮಗಳನ್ನೇ ನೋಡುತ್ತ ಕಾಲಹರಣ ಮಾಡುವುದಕ್ಕಿಂತಲೂ ನಮ್ಮ ಕಲ್ಪನೆಯನ್ನು ಶ್ರೀಮಂತಗೊಳಿಸುವ ಒಳ್ಳೆಯ ಪುಸ್ತಕಗಳನ್ನು ಓದಿ ಮಕ್ಕಳಲ್ಲೂ ಓದುವ ಅಭ್ಯಾಸ ಬೆಳೆಸಿದರೆ ಜ್ಞಾನದ ನಿಜವಾದ ಮಹತ್ವ ಮಕ್ಕಳಿಗೆ ಅರ್ಥವಾಗುತ್ತದೆ. ಬಡವರನ್ನು, ದೀನದಲಿತರನ್ನು ಕಂಡರೆ ಅನುಕಂಪ, ಸಹಾನುಭೂತಿ ಮುಂತಾದ ಮೌಲ್ಯಗಳನ್ನು ಹಿರಿಯರು ತಾವು ಆಚರಿಸುವುದರ ಮೂಲಕ ಕಿರಿಯರು ತಮ್ಮ ಜೀವನದಲ್ಲಿ ರೂಢಿಸಿಕೊಳ್ಳುವಂತೆ ಪ್ರೇರಕರಾಗಬೇಕು.

ಕೌಟುಂಬಿಕ ಸಂಬಂಧಗಳು ಗಾಢವಾಗಲು ಅತ್ಯಂತ ಅವಶ್ಯವಾಗಿರುವುದು ಹೊಂದಾಣಿಕೆ, ಸಾಮರಸ್ಯ. ಇದಕ್ಕೆ ಬೇಕಾಗಿರುವುದು ತ್ಯಾಗ ಮನೋಭಾವ. ಇಲ್ಲಿ ತ್ಯಾಗವೆಂದರೆ ಪ್ರಪಂಚವನ್ನು ತೊರೆದು ಹೋಗುವುದೆಂದರ್ಥವಲ್ಲ. ಇತರರ ಅಭಿಪ್ರಾಯಗಳಿಗೆ ಗೌರವ ಕೊಟ್ಟು ಅವಶ್ಯವಿದ್ದಲ್ಲಿ ನಮ್ಮ ಅಭಿಪ್ರಾಯ, ನಿಲುವುಗಳನ್ನು ಬದಲಾಯಿಸುವ ಸಾಮರ್ಥ್ಯವೇ ತ್ಯಾಗ. ಇತರರಿಗೂ ನಮ್ಮ ಅಂತರಂಗದಲ್ಲಿ ಜಾಗವನ್ನು ಮಾಡಿಕೊಡುವ ಔದಾರ್ಯ ಬೇಕು. ಇಂತಹ ಮೌಲ್ಯಗಳನ್ನು ಉಳಿಸಿಕೊಳ್ಳುವುದರಿಂದ ಮಾತ್ರವೇ ಇಂದಿನ "ಕಂಪ್ಯೂಟರ್" ಯುಗದಲ್ಲೂ ಶಿಥಿಲಗೊಳ್ಳುತ್ತಿರುವ ಕುಟುಂಬ ವ್ಯವಸ್ಥೆ ಪುನಃ ಚೇತರಿಸಿಕೊಳ್ಳಲು ಸಾಧ್ಯ.

— ಕುಮಾರಿ ಸ್ವರ್ಣಗೌರಿ

---

ಸೋಸಿನೋಡಿದರೀಗ ದೇಶದಾಧಾರಕ್ಕೆ
ವಾಸಿ ಕುಟುಂಬವದು ತಾಯಿಬೇರು||
ಭೀತಿಭಯ ತರವಲ್ಲ ರೀತಿನೀತಿಗಳೆಲ್ಲ
ಪ್ರೀತಿವಾತ್ಸಲ್ಯವೇ ಗಾಳಿನೀರು ||
ಸತಿಪತಿಯು ಒಂದಾಗಿ ಎಣ್ಣೆ ಬತ್ತಿಯ ಹಾಗೆ
ಬಾಳಿದರೆ ಮನೆತುಂಬ ಬೆಳಕೆ ಬೆಳಕು|
ಎತ್ತವದು ಎರಗೆ ತಾ ಕೋಣವದು ಕೆರೆಯ ಕಡೆ
ಒತ್ತೊತ್ತಿ ಎಳೆಯುತಿರೆ ನಾಕ-ನರಕ ||
ತಲೆಬಾಗಿ ಕೈಮುಗಿದು ನಡೆದರದು ಸಾಲದು
ಸಹನೆ ಸದ್ಭಾವನೆಯು ಬೇಕೆ ಬೇಕು|
ಹೆಣ್ಣು ಗಂಡಿನ ಶೀಲ ಕಣ್ಣುಗಳು ಸಮನಾಗಿ
ನೋಡುವಾ ದೃಷ್ಟಿ ತಾ ಬೆಳೆಯಬೇಕು||
ನೀತಿಯಿಂದಲಿ ಗಳಿಸಿ ಪ್ರೀತಿಯಿಂದಲಿ ಬಳಸಿ
ಕೋತಿಗುಣತರವಲ್ಲ ಹಂಚಿ ತಿನ್ನು|
ಹುದ್ದೆ ಹಣದಹಂಕಾರ ಇದ್ದರದು ಬಲುಕೇಡು
ರೂಪಯೌವನವೆಲ್ಲ ಕ್ಷಣಿಕವೆನ್ನು||
ಸ್ನೇಹ ಸೌಹಾರ್ದತೆಯು ವಾತ್ಸಲ್ಯವಿನಯ ಗುಣ
ಸಹಕಾರ ಶ್ರದ್ಧೆಯಿದು ಬೇಕೆ ಬೇಕು|
ಬುದ್ಧಿವಂತಿಕೆಗಿಂತ ಹೃದಯವಂತಿಕೆ ಶ್ರೇಷ್ಠ
ತ್ಯಾಗ ಸೇವಾ ಭಾವ ನಡತೆ ಸಾಕು||
ತನುಮನದ ಆರೋಗ್ಯ ಅನುರಾಗ ನಮಗಿರಲಿ
ಅನುಭವಾಮೃತವೆಲ್ಲ ಸವಿಯಬೇಕು|
ಕಡಿಮೆ ಬೇಡಿಕೆ ಇರಲಿ ದುಡಿಮೆ ಸಾಕಷ್ಟಿರಲಿ
ಕಡಿವಾಣ ಕಾಮಕ್ಕೆ ಹಾಕಬೇಕು||
ಬಾಲವೃದ್ಧರಿಗೆಲ್ಲ ಲಾಲನೆಯು ಪಾಲನೆಯು
ಕಾಲಕ್ಕೆ ತಕ್ಕಂತೆ ನಡೆಯಬೇಕು|
ಕರುಣೆ ಕಾರುಣ್ಯದಲಿ ಸರಳ ಜೀವನ ಮಾರ್ಗ
ಹರಣ ಹಾರುವ ತನಕ ಸಾಗಬೇಕು||
ಮಹಾ ಇಳೆಯು ಶ್ರೇಷ್ಠಗುಣ ಸಹನೆ ತ್ಯಾಗದ ರೂಪ
ಮಹಿಳೆಯಿದ್ದರೆ ಮನೆಯು ಜೇನುಗೂಡು|
ಸ್ವಾರ್ಥಸಾಧನೆಗಾಗಿ ವ್ಯರ್ಥ ಒಂಟ್ಯಾಗಿರಲು
ಅರ್ಥವಿಲ್ಲದ ಬದುಕು ಬರಿಯ ಕಾಡು||
ಕೆಸರಿನೊಳಗಿನ ಕಮಲ ಹಸನಾಗಿ ಇರುವಂತೆ
ವ್ಯಸನಗಳು ತಾಗದಲೆ ಬದುಕಬೇಕು|
ಸತ್ವಗುಣಿ ಸಂಸಾರಿ ಉತ್ತಮನು ಜಗದಲ್ಲಿ
ಸತ್ಸಂಗ ಸಂಸ್ಕಾರ ಪಡೆಯಬೇಕು||

*—ಈಶ್ವರ ಕಾಪಸೆ, ಬೆಳಗಾವಿ.*

### ತಂದೆತಾಯಿಯರಿಗೆ

ಪುಟ್ಟ ಕಂಗಳು ನಿಮ್ಮ ನೋಡುತಿಹುದು
ಹಗಲಿರುಳು ನಿಮ್ಮನವು ಲಕ್ಷ್ಯವಿಟ್ಟು
ನಿಮ್ಮ ಪ್ರತಿ ಶಬ್ದವನು ಎಡೆಬಿಡದೆ ಆಲಿಸಲು
ಚಿಕ್ಕ ಕಿವಿಗಳು ಸದಾ ತೆರೆದಿರುವವು
ನೀವು ಗೈಯುವುದೆಲ್ಲ ಗೈಯುವಾಕಾಂಕ್ಷೆಯಲಿ
ಕಿರುಕರಗಳಾತುರದಿ ಕಾಯುತಿಹವು
ನಿಮ್ಮಂತೆಯೇ ಬೆಳೆದು ಮುಂಬರುವ ಕನಸನ್ನು
ಕಾಣುತಿಹುದನವರತ ಪುಟ್ಟ ಮಗುವು.
ನಿಮ್ಮ ಮಗುವಿಗೆ ನೀವು ಆದರ್ಶಪುತ್ಥಳಿಯು,
ನಿಮ್ಮಸಮ ಮೇಧಾವಿ ಯಾರೂ ಇಲ್ಲ.
ಯಾವ ಸಂಶಯಕಲ್ಲಿ ನಿಮ್ಮ ಬಗೆಗೆ
ಆ ಪುಟ್ಟ ಮನದೊಳಗೆ ಆಸ್ಪದವೆ ಇಲ್ಲ.
ನಿಮ್ಮನೇ ನಂಬುವುದು ದೃಢನಿಷ್ಠೆಯಲ್ಲಿ,
ನಿಮ್ಮ ನುಡಿನಡೆಗಳನೇ ಅಪ್ಪಿ ಆಶ್ರಯಿಸುವುದು
ಅದರ ಮುಂದಿನ ಬಾಳು ನಿಮ್ಮ ಪಡಿನೆರಳಾಗುವುದು.
ಎಲ್ಲ ವಿಷಯದಿ ನೀವೇ ಸರಿಯೆಂದು ನಂಬುವುದು
ನಿಮ್ಮ ಜೀವನವದಕೆ ಪ್ರತ್ಯಕ್ಷ ದೃಷ್ಟಾಂತ
ಇದನರಿತು ಎಚ್ಚರಿರಿ ನಿಮ್ಮ ನಡೆನುಡಿಯಲ್ಲಿ.

ಸಂಗ್ರಹ: *Chicken Soup for the Soul* ಗ್ರಂಥದಿಂದ